ಶ್ರೀ ಎಂ. ಬಸವರಾಜು.—(ಸಿ) ಪ್ರಶ್ನೆಗೆ ಉತ್ತರವಾಗಿ 1,631 ಎಕರೆಗಳು ಎಂದು ಉತ್ತರ ಹೇಳಿದ್ದೀರಿ. ಈಗ ಎಷ್ಟು ಎಕರೆಗೆ ಅನುಕೂಲವಾಗಿದೆ ?

ಶ್ರೀ ಡಿ. ಪರಮೇಶ್ವರಪ್ಪ —2,200 ಎಕರೆಗಳು.

ಶ್ರೀ ಎಂ. ಬಸವರಾಜು. - ಟೇರ್ ಎಂಡಿನಲ್ಲಿರತಕ್ಕ ಜಮೀನುಗಳಿಗೆ ತೊಂದರೆಯಾಗಿದೆ ಎಂದು ಮನವಿಗಳು ಬಂದಿವೆ ಎಂದು ಒಪ್ಪಿಕೊಂಡಿದ್ದೀರಿ. ನೇಚರ್ ಆಫ್ ಕ್ರಾಪ್ ರೆಗ್ಯುಲೇಟು ಮಾಡುವಾಗ, ಮೊದಲಿನ ಅಚ್ಚುಕಟ್ಟುದಾರರು ಏನು ಇದ್ದಾರೋ, ಅವರಿಗೆ ತೊಂದರೆ ಆಗದ ರೀತಿಯಲ್ಲಿ ಹೊಸದಾಗಿ ಅಚ್ಚುಕಟ್ಟು ಮಾಡಿಕೊಂಡಿರುವವರಿಗೆ ರೆಗ್ಯುಲೇಷನ್ಸ್ ಕಪ್ಲೈ ಮಾಡುತ್ತೀರೋ ಇಥವಾ ಎಲ್ಲರಿಗೂ ಒಟ್ಟಿಗೇ ಅಪ್ಲೈ ಮಾಡುತ್ತೀರೋ ?

ಶ್ರೀ ಡಿ. ಪರಮೇಶ್ವರಪ್ಪ.—ಹೊಸದಾಗಿ ಅಚ್ಚುಕಟ್ಟು ಮಾಡಿಕೊಂಡಿರುವವರಿಗೆ ಅಪ್ಲೈ ಮಾಡುತ್ತೇವೆ.

ಶ್ರೀ ಎಂ. ಬಸವರಾಜು.—500-600 ಎಕರೆ ಅಚ್ಚುಕಟ್ಟುದಾರರಿಗೆ ತೊಂದರೆ ಆಗುತ್ತಾ ಇರುವುದರಿಂದ ಅದಷ್ಟು ಜಾಗ್ರತೆ, ಇಷ್ಟೇ ದಿವಸದೊಳಗೆ ಸೌಕರ್ಯ ಒದಗಿಸಿಕೊಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಬಹಳ ಹಳೇಕಾಲದ ಚ್ಯಾನಲ್ ಆಗಿರುವುದರಿಂದ ಸ್ವಲ್ಪ ಇಂಪ್ರೂವ್ ಮಾಡಬೇಕು. ಡ್ಯೂಟಿ ಇಂಪ್ರೂ ಮಾಡಬೇಕಾದುದರಿಂದ ಲೈನಿಂಗ್ ವಗೈರೆ ಹಾಕಬೇಕಾಗುತ್ತದೆ. ಆ ದಿಸೆಯಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—(ಇ) ಪ್ರಶ್ನೆಗೆ ಉತ್ತರವಾಗಿ "possibility of increasing the duty under the canal by proper resectioning the canal, providing controlling arrangements to the sluices in the upper reaches, regulation of crop period, nature of crop., etc., will be examined." ಎಂದು ಹೇಳಿದ್ದೀರಿ. ಈಗಾಗಲೇ ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಂಡಿದ್ದೀರೋ, ಅಥವಾ ಇನ್ನೂ ತೀರ್ಮಾನ ತೆಗೆದುಕೊಳ್ಳಬೇಕೋ ?

ಶ್ರೀ ಡಿ. ಪರಮೇಶ್ವರಪ್ಪ.—ತೀರ್ಮಾನ ತೆಗೆದುಕೊಂಡಿದ್ದೇವೆ. ಲೈನಿಂಗ್ ಮಾಡಿ ಡ್ಯೂಟಿ ಇಂಪ್ರೂವ್ ಮಾಡಿದರೆ ಜಾಸ್ತಿ ಜನರಿಗೆ ನೀರು ಕೊಡಬಹುದು. ಆ ದಿಸೆಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ.

Handing Relief Roads to the P.W.D. in Pavagada

767. Sri P. ANJANAPPA (Pavagada).—

Will the Minister for Public Works be pleased to state :—

(*a*) whether the relief road from the cross of Pavagada-Nagalamadika road *via* Kyathaganakere, Bhoopoor, B. K. Halli to Vaddarebu village has been handed over to the P.W.D. ;

(*b*) whether Government proposes to provide a high level causeway to Kyathagenakere Halla ;

(*c*) whether Government propose to provide a bridge across the halla near Bhoopoor in between Bhoopoor and B. K. Halli ;

(*d*) whether the road from Bugudoor *via* Appajihalli, Rayapate up to Hussainpura has been handed over to the P.W.D. ;

(*e*) if not, the action taken so far ?

Sri BASAVARAJ MAGAVI (Deputy Minister for Public Woks).—

(*a*) No.

(*b*) There is no proposal at present.

(*c*) This is being examined.

(*d*) No.

(*e*) Does not arise.

ಶ್ರೀ ಪಿ. ಅಂಜನಪ್ಪ.—(ಅ) ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈ ರಸ್ತೆ 20 ಮೈಲಿಗಳಷ್ಟು ದೂರ ಇದೆ. ಆಂಧ್ರ ಬಾರ್ಡರ್‌ವರೆಗೆ ಇದೆ. ಆದಕಾರಣ ಈ ರಸ್ತೆಯ ರಿಪೇರಿ ಕೆಲಸವನ್ನು ಜಾಗ್ರತೆ ಮಾಡಿಸುತ್ತೀರಾ?

†ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಹೇಳುತ್ತಿರುವ ರಸ್ತೆ ತಾಲ್ಲೂಕ್ ಬೋರ್ಡಿಗೆ ಸೇರಿರುವುದರಿಂದ ಅವರೇ ಆ ಕೆಲಸವನ್ನು ಮಾಡಿಸಬೇಕಾಗುತ್ತದೆ.

ಶ್ರೀ ಪಿ. ಅಂಜನಪ್ಪ.—ಅವರಲ್ಲಿ ದುಡ್ಡಿಲ್ಲ.

ಶ್ರೀ ಬಸವರಾಜ ಮಾಗಾವಿ.—ರ್ಯಾಂಡ್ ರೆವಿನ್ಯೂವನ್ನು ತಾಲ್ಲೂಕ್‌ಬೋರ್ಡ್‌ಗಳಿಗೆ ಕೊಟ್ಟ ಮೇಲೆ ಅವರಿಗೆ ಸಾಕಷ್ಟು ಹಣ ಸಿಗುತ್ತದೆ.

ಶ್ರೀ ಬಿ. ಎನ್. ರಾಮೇಗೌಡ.—ಇಂತಹ ಎಷ್ಟು ರಸ್ತೆಗಳನ್ನು ಇದುವರೆಗೆ ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಂಡಿದ್ದೀರಿ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸಭೆಗೆ ಹಿಂದೆಯೇ ತಿಳಿಸಿದಂತೆ ಇದುವರೆಗೆ 15 ಸಾವಿರ ಚಿಲ್ಲರೆ ಮೈಲಿಗಳಷ್ಟು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳಲಾಗಿದೆ. ಈ ರಸ್ತೆಗಳನ್ನು ಸುವ್ಯವಸ್ಥಿತ ರೀತಿಗೆ ತರುವವರೆಗೆ ಹೊಸ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಮುಂದೆ ತಾಲ್ಲೂಕ್‌ಬೋರ್ಡಿನವರೇ ರಸ್ತೆಗಳ ರಿಪೇರಿ ಕೆಲಸವನ್ನು ಮಾಡಿಸಬೇಕಾಗುತ್ತದೆ.

ಶ್ರೀ ಬಿ. ಎನ್. ರಾಮೇಗೌಡ.—ತಾಲ್ಲೂಕ್ ಬೋರ್ಡಿನವರಿಗೆ ಈ ರಸ್ತೆಯ ಕೆಲಸವನ್ನು ಮಾಡಿಸುವುದಕ್ಕೆ ಹೆಚ್ಚಿನ ತೊಂದರೆ ಇರುವುದರಿಂದ ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳುವ ಬಗ್ಗೆ ಪುನರ್ವಿಮರ್ಶೆ ಮಾಡುತ್ತೀರಾ?

ಶ್ರೀ ಬಸವರಾಜ ಮಾಗಾವಿ.—ಪುನರ್ವಿಮರ್ಶೆ ಮಾಡಬಹುದು.

Mr. SPEAKER.—Sri Raja Pid Naik has been authorised to put the Question.

Closure of Traffic on Muddebihal–Bijapur–Hoovina-hippargi Road during Rainy Season

802. Sri RAJA PID NAIK (Shorapur) [On behalf of SRI S. M. GUREDDI (Muddebihal)].—

Will the Minister for Public Works be pleased to state :—

(*a*) whether it has come to their notice that the traffic on Muddebihal–Bijapur–Hoovinahippargi road is being closed during rainy season ;

(*b*) whether it is a fact that the road from Muddebihal to Hoovinahippargi is in a bad condition ;

(*c*) the number o nalas on the road between Muddebihal and Hoovinahippargi ?